## ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ

ಸಿ.ಸಿ. ನಂ. 1080/2020

ಸಿ.ಡಬ್ಲೂಃ 7 ಪಿ.ಡಬ್ಲೂಃ 6

| | |
|---|---|
| ಹೆಸರುಃ | ಹನಮಂತಪ್ಪ |
| ತಂದೆಯ ಹೆಸರುಃ | ಬಸಪ್ಪ ಚಲವಾದಿ |
| ವಯಸ್ಸುಃ | 20 ವರ್ಷ |
| ಉದ್ಯೋಗಃ | ಒಕ್ಕಲುತನ |
| ವಿಳಾಸಃ | ಮುದೇನಗುಡಿ ತಾಃ ರೋಣ |

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 19/09/2024 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

1. ಚಾಸಾ–1 ನನ್ನ ತಾಯಿ. ಚಾಸಾ–4 ನನ್ನ ತಂದೆ. ಚಾಸಾ–5 ಮತ್ತು 6 ನನ್ನ ಅಕ್ಕಂದಿರು. ನನ್ನ ತಂದೆ ರೋಣ KSRTC ಬಸ್ ಡಿಪೋದಲ್ಲಿ ಕಂಡಕ್ಟರ ಆಗಿ ಕೆಲಸ ಮಾಡುತ್ತಿದ್ದರು. 2006 ರಲ್ಲಿ ಸಂಗಪ್ಪ ನನ್ನ ತಂದೆಗೆ ಜಾಗ ಕೊಟ್ಟಿದ್ದರು. ಸದರಿ ಜಾಗದಲ್ಲಿ ನಾವು ಮನೆ ಕಟ್ಟಿದ್ದೇವು. ಪಂಚಾಯತಿಯಿಂದ ಸಹಾಯ ಧನವನ್ನು ಪಡೆದಿದ್ದೇವು. ಆರೋಪಿತರು ಬಂದು ನಮ್ಮ ಜಾಗದಲ್ಲಿ ನೀವು ಮನೆ ಕಟ್ಟಿದ್ದೀರಿ ಖಾಲಿ ಮಾಡಿ ಎಂದು ದಿನಾಂಕ 10/06/2020 ರಂದು ಸಂಜೆಃ 5–30 ಕ್ಕೆ ಆರೋಪಿತರು ನಮ್ಮ ಮನೆಯ ಮುಂದೆ ಬಂದು ಗಲಾಟೆ ಮಾಡಿದರು. ಆರೋಪಿತರು ಎಲ್ಲರೂ ನನ್ನ ಮತ್ತು ನನ್ನ ಅಕ್ಕಂದಿರು ಮತ್ತು ನನ್ನ ತಾಯಿ ಮತ್ತು ನನ್ನ ತಂದೆಯನ್ನು ಕೈಹಿಡಿದು ಎಳೆದಾಡಿದರು. ನ್ಯಾಯಾಲಯದ ಮುಂದೆ ಇರುವ 1, 3 ಮತ್ತು 5 ನೇ ಆರೋಪಿತರು ನಮ್ಮ ಜಾಗದಲ್ಲಿ ಬಂದು ಅಗಿ ಹಚ್ಚುತ್ತಿದ್ದರು. ಸದರಿ ಜಾಗ ನಮ್ಮದು ಎಂದು ನಾವು ಆಗ ತಕರಾರು ಮಾಡಿದೆವು. ಓಣಿಯವರು ಜಗಳವನ್ನು ಬಿಡಿಸಿದರು.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. 1 ರಿಂದ 5 ನೇ ಆರೋಪಿತರು ಎಲ್ಲರೂ ಸೇರಿ ನಮ್ಮ ಮನೆಯ ಹತ್ತಿರ ಬಂದು ನಮ್ಮ ಮನೆಯ ಬಾಗಿಲಿಗೆ ಮುಳ್ಳು ಹಚ್ಚಿದರು ಎಂದರೆ ನಿಜ. ಆಗ ನನ್ನ ತಾಯಿ ನೀವು ಮುಳ್ಳು ಹಚ್ಚಿದರೇ ನಾವು ಎಲ್ಲಿ ಅಡ್ಡಾಡಬೇಕು ಎಂದು ಕೇಳಿದರು, ಆಗ ಆರೋಪಿತರು ಅವರಿಗೆ ಎಳೆದಾಡಿದರು ಎಂದರೆ ನಿಜ. ಆಗ ನನ್ನ ತಂದೆ ಬಂದಾಗ ಅವರಿಗೂ ಸಹ ಬೋಸುಡಿ ಮಗನೇ ಎಂದು ಬೈದಾಡಿದರು ಎಂದರೆ ನಿಜ. ಆಗ ನನ್ನ ತಂದೆ ನಾವು ಖರೀದಿ ಸಂಚಗಾರ ಪತ್ರವನ್ನು ಮಾಡಿಕೊಂಡು ಮನೆಯಲ್ಲಿ ವಾಸವಾಗಿದ್ದೇನೆ ಎಂದು ಹೇಳಿದರು ಎಂದರೆ ನಿಜ. ಆಗ ಆರೋಪಿತರು ನನ್ನ ತಂದೆಗೆ ಕೈಯಿಂದ ಸಿಕ್ಕ ಸಿಕ್ಕಲ್ಲಿ ಹೊಡಿ ಬಡಿ ಮಾಡಿದರು ಎಂದರೆ ನಿಜ. ಆಗ ನಾನು, ನನ್ನ ಅಕ್ಕ ಕವಿತಾ ಮತ್ತು ಬಸಮ್ಮ ಹಾಗೂ ನಮ್ಮ ಓಣಿಯ ಭರಮಪ್ಪ, ಲಕ್ಷ್ಮವ್ವ, ಗುರಪ್ಪ ಸೇರಿ ಜಗಳವನ್ನು ಬಿಡಿಸಿದರು ಎಂದರೆ ನಿಜ. ಆರೋಪಿತರು ಹೋಗುವಾಗ ನಮಗೆ ಜೀವದ ಬೆದರಿಕೆ ಹಾಕಿದರು ಎಂದರೆ ನಿಜ. ನಂತರ ನಾವು ಮನೆಯಲ್ಲಿಯೆ ಉಪಚಾರ ಪಡೆದುಕೊಂಡೆವು ಎಂದರೆ ನಿಜ.

**ಪಾಟೀ ಸವಾಲು ಆರೋಪಿ ಪರ ಶ್ರೀ PKU ವಕೀಲರಿಂದಃ**

ಮುದೇನಗುಡಿಯಲ್ಲಿ ಆರೋಪಿತರಿಗೆ ಸೇರಿದಂತಹ 19 ಗುಂಟೆ ಜಾಗ ಇದೆ ಎಂದರೆ ನಿಜ. ಅದರಲ್ಲಿ ಅವರು ಮನೆ ಕಟ್ಟಿಸಿಕೊಂಡು ಅಲ್ಲೇ ವಾಸವಾಗಿದ್ದಾರೆ ಎಂದರೆ ನಿಜ. 19 ಗುಂಟೆ ಪೈಕಿ 2 ಗುಂಟೆಯನ್ನು ನನ್ನ ತಂದೆ ಮೋಸ ದಿಂದ ಪತ್ರ ಮಾಡಿಕೊಂಡು ಅದು ತಮ್ಮದು ಎಂದು ಸಾಧಿಸುತ್ತಿದ್ದಾರೆ ಎಂದರೆ ಸಾಕ್ಷಿ ನಾನು ಆಗ ಚಿಕ್ಕವನಿದ್ದೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯ ಆರೋಪಿತರ ವಿರುದ್ಧ OS 190/2020 ರಂತೆ ಕೇಸ್ ಮಾಡಿದ್ದಾರೆ ಎಂದರೆ ನಿಜ. ಆರೋಪಿತರು ಆ ಕೇಸ್ ದಾಖಲು ಆದ ನಂತರ ಆ ರೀತಿ ಖೊಟ್ಟಿ ದಾಖಲೆಗಳನ್ನು ರದ್ದು ಪಡಿಸಿಕೋ, ನಮ್ಮ ವಹಿವಾಟಿಗೆ ಹರಕತ್ತು ಮಾಡಬೇಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಹಿರಿಯರ ಮೂಲಕ ಸಹ ಆರೋಪಿತರು ನನ್ನ ತಂದೆಗೆ ಹೇಳಿಸಿದ್ದರು ಎಂದರೆ ಸಾಕ್ಷಿ ಜಾಗ ಖಾಲಿ ಮಾಡಲು 2 ವರ್ಷ ಟೈಮ್ ತೆಗೆದುಕೊಂಡಿದ್ದರು, ಆದರೆ ಆರೋಪಿತರು ಎರಡು ವರ್ಷದ ಒಳಗಾಗಿ ಆ ಜಾಗಕ್ಕೆ ಬಂದು ಅಲ್ಲಿ ಅಗಿ ಹಚ್ಚುವುದು ಮಾಡುತ್ತಿದ್ದರು ಎಂದು ಹೇಳುತ್ತಾರೆ. 10/06/2020 ರಂದು ನನ್ನ ತಂದೆ ಅನಾವಶ್ಯಕವಾಗಿ ಆರೋಪಿತರ ಜೊತೆ ಜಗಳ ತೆಗೆದರು ಎಂದರೆ ಸರಿಯಲ್ಲ. ಆ ಸಂಬಂಧ ಆರೋಪಿತರು ಸಿ.ಸಿ. 1079/2020 ರಂತೆ ಕೇಸ್ ದಾಖಲು ಮಾಡಿದ್ದಾರೆ ಎಂದರೆ ನಿಜ. ಆರೋಪಿತರು ಕೇಸ್ ದಾಖಲಿಸಿದ್ದಕ್ಕೆ ಸಿಟ್ಟಾಗಿ ನಮ್ಮ ತಂದೆ ನನ್ನ ತಾಯಿ ಕಡೆಯಿಂದ ಈ ಒಂದು ಸುಳ್ಳು ಕೇಸ್ ನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಮತ್ತು ನಮ್ಮ ತಂದೆ ತಾಯಿ

ಅವಾಚ್ಯ ಶಬ್ದಗಳಿಂದ ಬೈದಾಡಿದ್ದಾರೆ, ಕೈಯಿಂದ ಎಳೆದಾಡಿದ್ದಾರೆ ಮತ್ತು ಜೀವದ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 1080/2020

ಸಿ.ಡಬ್ಲೂಃ 3 ಪಿ.ಡಬ್ಲೂಃ 5

ಹೆಸರುಃ ತಿಪ್ಪಣ್ಣ

ತಾಯಿಯ ಹೆಸರುಃ ಯಮನವ್ವ ಚಲವಾದಿ

ವಯಸ್ಸುಃ 60 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮುದೇನಗುಡಿ ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 19/09/2024 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

1. ಸುಮಾರು 3–4 ವರ್ಷಗಳ ಹಿಂದೆ ಮುದೇನಗುಡಿಯಲ್ಲಿ ನಮ್ಮ ಮನೆಯ ಮುಂದೆ ಒಂದು ದಾಖಲೆಗೆ ಸಹಿ ಮಾಡಿದ್ದೇನೆ. ಸದರಿ ದಾಖಲೆ ಈಗ ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 2 ಬಿ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಇಬ್ಬರು ಪೊಲೀಸರು ಇದ್ದರು. ಆ ಸಮಯದಲ್ಲಿ ಪೊಲೀಸರು ತಾವು ಬಂದಿರುವುದಕ್ಕೆ ಸಹಿ ಮಾಡಿಸಿಕೊಂಡಿದ್ದಾರೆ. ಚಾಸಾ–1 ನಮ್ಮ ಓಣಿಯವರು. ಚಾಸಾ–1 ಮತ್ತು ಆರೋಪಿತರ ನಡುವೆ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆಗ ಮಃ 1–30 ಆಗಿತ್ತು. ಅಲ್ಲಿ ಬುಡ್ಡಪ್ಪ ಬಸಪ್ಪ ಚಲವಾದಿ ಮತ್ತು ಬಸವಂತಪ್ಪ ಬಸಪ್ಪ ಚಲವಾದಿ ಇವರ ಮನೆ ಇರುತ್ತವೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಓಣಿಯವರು.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. ದಿಃ14/06/2020 ರಂದು ನಾನು ಮತ್ತು ಬಸವರಾಜ ಚಲವಾದಿ ಇದ್ದೇವು ಎಂದರೆ ಸಾಕ್ಷಿ ಬಸವರಾಜ ನಂತರ ಬಂದ ಎಂದು ಹೇಳುತ್ತಾರೆ. ಅಲ್ಲಿ ಪೊಲೀಸರು ನಮ್ಮ ಎದುರಿಗೆ ಪಂಚನಾಮೆ ಮಾಡಿ ನಮ್ಮ ಸಹಿ ತೆಗೆದುಕೊಂಡರು ಎಂದರೆ ನಿಜ. ಪಂಚನಾಮೆಯನ್ನು ಬೆಃ 10-00 ರಿಂದ 11-00 ಗಂಟೆಗೆ ಮಾಡಿದ್ದಾರೆ ಎಂದರೆ ಇರಬಹುದು ಎಂದು ಹೇಳುತ್ತಾರೆ. 10/06/2020 ರಂದು ಸಂಜೆ 5-30 ಕ್ಕೆ ಆರೋಪಿತರು ಚಾಸಾ-1 ಇವರ ಮನೆಯ ಮುಂದೆ ಹೋಗಿ ಅವರ ಮನೆಯ ಬಾಗಿಲಿಗೆ ಮುಳ್ಳು ಹಚ್ಚಿದ್ದರು, ಆ ಸಂಬಂದ  ಜಗಳ ವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ನಮ್ಮ ಎದುರುಗಡೆ ಪಂಚನಾಮೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

2. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿತರಿಗೆ  ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**